ಸಂದರ್ಭದಲ್ಲೂ ನನ್ನನ್ನು ಕರೆಯದಿದ್ದರೆ ಇನ್ನೇನು ಹೇಳಿಯಾಳು? ನಾನು ಮರು ಮಾತಾಡಲಿಲ್ಲ. ನಮ್ಮಿಬ್ಬರ ಮಧ್ಯೆ ಮೌನ ತೀರಾ ಅಸಹನೀಯವಾಗಿತ್ತು.

'ಅಷ್ಟಕ್ಕೂ ಅಳುವಂಥದ್ದೇನಾಗಿದೆ? ಒಳ್ಳೆಯ ಮನುಷ್ಯ. ಮುಗ್ಧ. ತುಂಬು ಜೀವನ ಬದುಕಿದ್ದಾರೆ. ಅವರ ವಿರುದ್ಧ ಮಾತಾಡುವಂಥದ್ದು ಏನೂ ಇಲ್ಲ. ಇಷ್ಟರ ಮೇಲೂ ಅಳಬೇಕು ಅನ್ನಿಸಿದರೆ ಅತ್ತು ಬಿಡಿ.'

ನನ್ನ ಕಣ್ಣು ತೇವವಾಗಿದ್ದರೂ, ಕಣ್ಣಿನಿಂದ ನೀರ ಹನಿ ಕೆಳಗೆ ಜಾರಲಿಲ್ಲ.

'ಮಂಗಳವಾರವಂತೆ ಹೋಗಿದ್ದು, ರಾತ್ರಿ ಹತ್ತು ಗಂಟೆಗೆ. ಗುರುವಾರ ಹತ್ತನೇ ದಿನ. ತಲೆಗೆ ನೀರು ಹಾಕಿಕೊಳ್ಳಿ. ಅವರ ಆತ್ಮಕ್ಕೆ ಶಾಂತಿ ಇರಲಿ.'

ಮೌನ ಮತ್ತೆ ಸ್ವಲ್ಪ ಹೊತ್ತು ಮುಂದುವರೆಯಿತು.

'ನಿಜ, ನಮ್ಮನೆಗೆ ಈಗ ಲ್ಯಾಂಡ್‌ಲೈನ್ ಫೋನ್ ಇಲ್ಲ. ಆಫೀಸಿನ ಮೊಬೈಲ್ ವಾಪಸ್ ಕೊಟ್ಟ ಮೇಲೆ. ಆ ನಂಬರೂ ಇಲ್ಲ. ಅದಕ್ಕೇ ತಿಳಿಸಿಲ್ಲ.' ನನ್ನ ಧ್ವನಿ ನನಗೇ ಕೇಳಿಸದಷ್ಟು ಕ್ಷೀಣವಾಗಿತ್ತು.

'ನಿಜ ಹೇಳಿ, ನಿಮಗೆ ಸತ್ಯವಾಗಲೂ ಹಾಗೆ ಅನ್ನಿಸ್ತಾ ಇದೆಯಾ?'

ಅವಳ ಪ್ರಶ್ನೆ ಮತ್ತಷ್ಟು ನೇರವಾಗಿತ್ತು. 'ನಮ್ಮ ನಂಬರ್‌ಗಳು ಟ್ರೇಸ್ ಮಾಡಲಾಗದೇ ಇದ್ದಷ್ಟು ಕಠಿಣವಾಗಿವೆಯೆ?'

ಉತ್ತರ ನನಗೂ ಗೊತ್ತಿತ್ತು. ನಮಗೆ ವಿಷಯ ತಿಳಿಸಲೇಬೇಕೆಂದರೆ ನಂಬರು ಹುಡುಕುವುದೇನೂ ಕಷ್ಟವಾಗಿರಲಿಲ್ಲ. ರವಿಯ ಬಳಿ ನಮ್ಮ ಮಗನ ನಂಬರ್ ಇತ್ತು. ಅವನ ಫೇಸ್‌ಬುಕ್ ಅಕೌಂಟ್ ಮಾಹಿತಿ ಇತ್ತು. ಆದರೂ ಯಾರೂ ತಿಳಿಸಲಿಲ್ಲ. ಸತ್ತು ಆರು ದಿನವಾದರೂ!

ನಾನು ಸೋಫಾದಿಂದ ಮೇಲೆ ಎದ್ದೆ. ಎಂದಿಗಿಂತಲೂ ಏಕಾಂತದ ಅವಶ್ಯಕತೆ ಈಗ ಹೆಚ್ಚಾಗಿತ್ತು.

ನಾಗಣ್ಣ ಸತ್ತಿದ್ದು ಆಘಾತದ ವಿಷಯ, ನಿಜ. ಆದಾದ ನಂತರ ಈ ಪರಿ ವಿಷಯ ಚರ್ಚೆಯಾಗ್ತಾ ಇದೆಯಲ್ಲ. ಅದು ಇನ್ನೂ ಆಘಾತಕಾರಿ. ಅಂದರೆ, ಅಕ್ಷರಶಃ ಅವರು ನಮ್ಮನ್ನು ದೂರವಿಟ್ಟಿದ್ದಾರೆ. ನನ್ನೊಡನೆ ಸಂಬಂಧ ಅರಿವಿಗೇ ಬಾರದಂತೆ ಆರಿ ಹೋಗಿದೆ.

ಅವಳು ನನ್ನನ್ನೇ ನೋಡುತ್ತಿದ್ದಳು. ನಾನು ರೂಮಿನ ಒಳಗೆ ಹೋಗಿ ಬಾಗಿಲು ಹಾಕಿಕೊಂಡೆ. ನನ್ನ ಮುಂದೆ ಅನೇಕ ಚಿತ್ರಗಳು ಬಿಡಿ ಬಿಡಿಯಾಗಿ ಹಾಸಿಕೊಂಡವು.

★★★

ನನಗೂ ನಾಗಣ್ಣನಿಗೂ ಇಪ್ಪತ್ತು ವರ್ಷಗಳ ಅಂತರ. ನಮ್ಮ ಅಪ್ಪನ ಸ್ವಂತ ತಮ್ಮ ಅವನು. ನಾವೆಲ್ಲ ಅವನ ಮಡಿಲಲ್ಲೇ ಆಡಿ ಬೆಳೆದದ್ದು. ಏಕವಚನದಲ್ಲೇ ಮಾತನಾಡಿಸುತ್ತಿದ್ದದ್ದು. ಆಗಿನ ನಾಗಣ್ಣನೆಂದರೆ, ಇಂದಿಗೆ ಹೇಗೋ ಹಾಗೇ. ಸಾದಾ ಸೀದಾ ಮನುಷ್ಯ. ಬದುಕಿನ ಬೆರಗನ್ನು ಕಡೆಯವರೆಗೂ ಉಳಿಸಿಕೊಂಡ ಅದ್ಭುತ ವ್ಯಕ್ತಿ. ಅದ್ಭುತ ಎಂದ ಕೂಡಲೇ ನೆನಪಾಯಿತು. ನಮ್ಮೂರ ಗ್ರಾಮದೇವತೆಯನ್ನು ಹೂವಿನ ಅಪ್ಪಣೆ ಕೇಳಿದಾಗಲೆಲ್ಲ, ನಾವು ಕೇಳಿದ ಹೂಗಳನ್ನೇ ದೂರದಲ್ಲೇ ಕೂತು ಬೀಳಿಸಿ, ನಮಗೆ ಅಚ್ಚರಿ ಹುಟ್ಟಿಸುತ್ತಿದ್ದ. ಅವನು ದೇವರೊಡನೆ ಮಾತಾಡುವುದೇ ವಿಶಿಷ್ಟವಾಗಿತ್ತು. 'ಹೂವು ಕೊಡಮ್ಮ, ಎಷ್ಟು ಹೊತ್ತು ಕಾಯೋದು, ನಿನ್ನ ಬಲಭಾಗದಲ್ಲಿದೆಯಲ್ಲ ಆ ಕೆಂಪು ದಾಸವಾಳಾನ ಬಿಸಾಡು, ಪರೀಕ್ಷೆ ಮಾಡಬೇಡ' ಅವನ ಮಾತು ಮುಗಿಸುವ ಮುನ್ನವೇ ಅವನು ಕೇಳಿದ್ದ ದಾಸವಾಳ ಅಷ್ಟೂ ಹೂವುಗಳ ಮಧ್ಯೆ ದಾರಿ